VIJAYA KARNATAKA

ವಿಜಯ ಕರ್ನಾಟಕ

NAMMA UDUPI

02 SEP 2026

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಕೀಹೋಲ್, ರೋಬೋಟಿಕ್ ಬಳಕೆ

ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ

ವಿಕ ಸುದ್ದಿಲೋಕ ಉಡುಪಿ

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಕೀಹೋಲ್ ಮತ್ತು ಅತ್ಯಾಧುನಿಕ ರೋಬೋಟ್‌ನ ಸಂಯೋಜನೆಯನ್ನು ಬಳಸಿ ಶಸ್ತ್ರಚಿಕಿತ್ಸೆ ನಡೆಸಿ 58 ವರ್ಷದ ಮಹಿಳೆಯೊಬ್ಬರ ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ನ್ನು ಯಶಸ್ವಿಯಾಗಿ ತೆಗೆದು ಕೇವಲ ಏಳು ದಿನಗಳಲ್ಲಿ ರೋಗಿಯನ್ನು ಮನೆಗೆ ಕಳುಹಿಸಿದ ಸಾಧನೆ ಮಾಡಿದ್ದಾರೆ.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಹೊಂದಿರುವ ವಿಶ್ವ ದರ್ಜೆಯ ಶಸ್ತ್ರಚಿಕಿತ್ಸಾ ಮೂಲಸೌಕರ್ಯಕ್ಕೆ ಇದು ಸಾಕ್ಷಿಯಾಗಿದೆ. ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್(ಮಾಹೆ) ಬೋಧನಾ ಆಸ್ಪತ್ರೆಯು ಅತ್ಯಾಧುನಿಕ ರೊಬೊಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆ, ಆಧುನಿಕ ಶಸ್ತ್ರಚಿಕಿತ್ಸಾ ಕೊಠಡಿ ಸಹಿತ ಬಹುಶಿಸ್ತೀಯ ಕ್ಯಾನ್ಸರ್ ತಂಡದೊಂದಿಗೆ ಅಂತಾರಾಷ್ಟ್ರೀಯ ಗುಣಮಟ್ಟದ ಸೌಲಭ್ಯ ಹೊಂದಿದೆ. ಇದು ಕರಾವಳಿ ಕರ್ನಾಟಕ ಮತ್ತು ಸುತ್ತಮುತ್ತಲ ಪ್ರದೇಶದ ರೋಗಿಗಳಿಗೆ ವರದಾನವಾಗಿದೆ ಎಂದು ಮಾಹೆ ಹೇಳಿದೆ.

ಪ್ರಕರಣದ ಹಿನ್ನೆಲೆ: ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿದ್ದ ಲಕ್ಷಣದೊಂದಿಗೆ ಆಸ್ಪತ್ರೆಗೆ ಬಂದಿದ್ದರು. ಸ್ಕ್ಯಾನ್‌ನಲ್ಲಿ ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಬೆಳೆಯುವ ಕ್ಯಾನ್ಸರ್ ಗಡ್ಡೆ ಕಂಡುಬಂದಿತ್ತು. ಇದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು. ರೋಗಿಯ ಯಕೃತ್ತಿಗೆ ರಕ್ತ ಪೂರೈಸುವ ಅಪಧಮನಿಗಳಲ್ಲಿ ಒಂದು ಗಡ್ಡೆಯ ಸಮೀಪದಲ್ಲೇ ಶಸ್ತ್ರಚಿಕಿತ್ಸೆಯ ಸ್ಥಳದ ಮೂಲಕವೇ ಅಸಹಜ ಮಾರ್ಗದಲ್ಲಿ ಹಾದುಹೋಗುತ್ತಿದ್ದು, ಕೆಲವೇ ಜನರಲ್ಲಿ ಕಂಡುಬರುವ ಈ ವ್ಯತ್ಯಾಸ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವ ಮತ್ತು ಗಾಯದ ಅಪಾಯವನ್ನು ಬಹಳವಾಗಿ ಹೆಚ್ಚಿಸುತ್ತದೆ.

8 ಗಂಟೆಗಳ ಕಾಲ ನಡೆದ ಶಸ್ತ್ರ ಚಿಕಿತ್ಸೆ: ಉದರ ಶಸ್ತ್ರಚಿಕಿತ್ಸೆಯಲ್ಲಿ ಅತ್ಯಂತ ಸಂಕೀರ್ಣವಾದ ಶಸ್ತ್ರಚಿಕಿತ್ಸೆ ನಡೆಸಿ ಮೇದೋಜೀರಕ ಗ್ರಂಥಿಯ ತಲೆ, ಸಣ್ಣ ಕರುಳಿನ ಒಂದು ಭಾಗ, ಪಿತ್ತರಸ ನಾಳ ಮತ್ತು ಪಿತ್ತಕೋಶವನ್ನು ತೆಗೆದುಹಾಕಿ ನಂತರ ಆಹಾರ ಮತ್ತು ಜೀರ್ಣರಸಗಳು ಮತ್ತೆ ಸಾಮಾನ್ಯವಾಗಿ ಹರಿಯುವಂತೆ ಜೀರ್ಣಾಂಗವನ್ನು ಜಾಗರೂಕತೆಯಿಂದ ಮತ್ತೆ ಜೋಡಿಸಲಾಯಿತು.

ದೊಡ್ಡ ಗಾಯ ಮತ್ತು ಸಾಮಾನ್ಯವಾಗಿ ಹೆಚ್ಚು ನೋವು ಹಾಗೂ ದೀರ್ಘ ಚೇತರಿಕೆಗೆ ಕಾರಣವಾಗುವ ಸಾಂಪ್ರದಾಯಿಕ ತೆರೆದ ಶಸ್ತ್ರಚಿಕಿತ್ಸೆಯ ಬದಲಿಗೆ, ವೈದ್ಯರು ಹೈಬ್ರಿಡ್ ಹಾಗೂ ಕನಿಷ್ಠ ಆಕ್ರಮಣಕಾರಿ ವಿಧಾನವನ್ನು ಆಯ್ಕೆ ಮಾಡಿಕೊಂಡು, ಗಡ್ಡೆಯನ್ನು ಸಣ್ಣ ಕೀಹೋಲ್ ಛೇದದ ಮೂಲಕ ತೆಗೆದುಹಾಕಿದರು. ಅಲ್ಲದೆ ಸೂಕ್ಷ್ಮ ಪುನರ್ ರಚನೆಯನ್ನು ರೊಬೊಟಿಕ್ ವ್ಯವಸ್ಥೆಯನ್ನು ಬಳಸಿ ನಡೆಸಲಾಯಿತು. ಶಸ್ತ್ರಚಿಕಿತ್ಸೆ ಸುಮಾರು 8 ಗಂಟೆಗಳ ಕಾಲ ನಡೆಯಿತು ಮತ್ತು ಕೇವಲ 200 ಮಿ.ಲೀ. ರಕ್ತಸ್ರಾವವಾಯಿತು. ರೋಗಿ ಯಾವುದೇ ಗಂಭೀರ ತೊಂದರೆಗಳಿಲ್ಲದೆ ಚೇತರಿಸಿಕೊಂಡು, 7ನೇ ದಿನ ಆಸ್ಪತ್ರೆಯಿಂದ ಬಿಡುಗಡೆಯಾದರು.

ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ.ನವೀನಾ ಎ. ಎನ್. ಕುಮಾರ್, ಮಾಹೆ ಟೀಚಿಂಗ್ ಹಾಸ್ಪಿಟಲ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಮಾಹಿತಿ ನೀಡಿದರು. ಶಸ್ತ್ರಚಿಕಿತ್ಸಾ ತಂಡದಲ್ಲಿ ಡಾ. ನವಾಜ್ ಉಸ್ಮಾನ್, ಡಾ.ಪ್ರೀತಿ ಎಸ್. ಶೆಟ್ಟಿ, ಡಾ. ಅಖಿಲ್ ಪಾಲೋಡ್ ಹಾಗೂ ಡಾ. ಅನಂತಕೃಷ್ಣನ್ ಬಾಲಕೃಷ್ಣನ್ ಸೇರಿದಂತೆ ಅರಿವಳಿಕೆ ತಜ್ಞರು ಉಪಸ್ಥಿತರಿದ್ದರು.

KANNADA PRABHA

ಕನ್ನಡಪ್ರಭ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ: ಯಶಸ್ವಿ ಕಿಹೋಲ್ ರೊಬೋಟಿಕ್ ಶಸ್ತ್ರಚಿಕಿತ್ಸೆ

ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಸಮಸ್ಯೆ ಪರಿಹಾರ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಉದರ ಶಸ್ತ್ರಚಿಕಿತ್ಸೆಯಲ್ಲಿನ ಅತ್ಯಂತ ಸಂಕೀರ್ಣ ಕೀಹೋಲ್ ಮತ್ತು ಆಧುನಿಕ ರೊಬೊಟ್ ತಂತ್ರಜ್ಞಾನದ ಸಂಯೋಜನೆಯ ಮೂಲಕ 58 ವರ್ಷದ ಮಹಿಳೆಯ ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಅನ್ನು ಯಶಸ್ವಿಯಾಗಿ ತೆಗೆದುಹಾಕಲಾಗಿದೆ.

ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿ, ಕಾಮಾಲೆ ರೋಗದ ದೂರಿನೊಂದಿಗೆ ಆಸ್ಪತ್ರೆಗೆ ಬಂದಿದ್ದರು. ಪರಿಶೀಲನೆಯ ವೇಳೆ ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಕ್ಯಾನ್ಸರ್‌ಗಡ್ಡೆ ಕಂಡುಬಂದಿತು.

ಯಕೃತ್ತಿಗೆ ರಕ್ತ ಪೂರೈಸುವ ಅಪಧಮನಿಗಳಲ್ಲೊಂದು ಗಡ್ಡೆಯ ಸಮೀಪದಲ್ಲಿ ಹಾದು ಹೋಗಿತ್ತು. ಕೆಲವೇ ಜನರಲ್ಲಿ ಕಂಡುಬರುವ ಈ ವ್ಯತ್ಯಾಸವು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವ ಮತ್ತು ಗಾಯದ ಅಪಾಯ ಹೆಚ್ಚಿಸುವ ಸಾಧ್ಯತೆ ಇತ್ತು.

ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು, ತಂಡವು 'ವಿಪಲ್ಸ್ ಶಸ್ತ್ರಚಿಕಿತ್ಸೆ' ಎಂದೇ ಹೆಚ್ಚು ಪರಿಚಿತವಾಗಿರುವ ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿಯನ್ನು ನಡೆಸಿತು. ಹೊಟ್ಟೆಯಲ್ಲಿ ಸಣ್ಣ ರಂಧ್ರಗಳನ್ನು ಮಾಡಿ ಗಡ್ಡೆಯನ್ನು ಕತ್ತರಿಸಿ ತೆಗೆದುಹಾಕಲಾಯಿತು ಮತ್ತು ರೊಬೊಟಿಕ್ ತಂತ್ರಜ್ಞಾನದ ಮೂಲಕ ಜೀರ್ಣಾಂಗವನ್ನು ಜಾಗರೂಕತೆಯಿಂದ ಜೋಡಿಸಲಾಯಿತು. ರೋಗಿಯು ಚೇತರಿಸಿಕೊಂಡಿದ್ದು ಕೇವಲ 7 ದಿನಗಳಲ್ಲಿ ಅವರನ್ನು ಮನೆಗೆ ತೆರಳಿದ್ದಾರೆ.

ಶಸ್ತ್ರಚಿಕಿತ್ಸಾ ತಂಡದಲ್ಲಿ ಡಾ. ನವಾಜ್ ಉಸ್ಮಾನ್, ಡಾ. ಪ್ರೀತಿ ಎಸ್. ಶೆಟ್ಟಿ, ಡಾ. ಅಖಿಲ್ ಪಾಲೋಡ್ ಹಾಗೂ ಡಾ. ಅನಂತಕೃಷ್ಣನ್ ಬಾಲಕೃಷ್ಣನ್ ಸೇರಿದಂತೆ ಅರಿವಳಿಕೆ ತಜ್ಞರು ಸಹಕರಿಸಿದ್ದರು.



ಈ ಯಶಸ್ವಿ ಶಸ್ತ್ರಚಿಕಿತ್ಸೆಯ ಬಗ್ಗೆ ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ. ನವೀನ್ ಎ. ಎನ್. ಕುಮಾರ್ 'ಕೀಹೋಲ್ ಮೂಲಕ ಗಡ್ಡೆ ತೆಗೆಯುವುದನ್ನು ರೊಬೊಟಿಕ್ ಸಂಯೋಜನೆ ಮೂಲಕ ಸುರಕ್ಷಿತವಾಗಿ ಹಾಗೂ ಹೆಚ್ಚಿನ ನಿಖರತೆಯಿಂದ ಪೂರ್ಣಗೊಳಿಸಲು ಸಾಧ್ಯವಾಯಿತು. ರೋಗಿಗಳನ್ನು ದೂರದ ನಗರಗಳಿಗೆ ಕಳುಹಿಸುವ ಬದಲಿಗೆ, ಇಂತಹ ಅತ್ಯಾಧುನಿಕ, ಕನಿಷ್ಠ ಆಕ್ರಮಣಕಾರಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯನ್ನು ಮನೆಯ ಸಮೀಪದಲ್ಲೇ ಒದಗಿಸಲು ಸಾಧ್ಯವಾಗಿರುವುದು ಈ ಪ್ರದೇಶದ ಜನರಿಗೆ ಒಂದು ಮಹತ್ವದ ಹೆಜ್ಜೆಯಾಗಿದೆ ಎಂದಿದ್ದಾರೆ.

MANGALORE Edition
Sep 02, 2026 Page No. 06
Powered by: erelego.com

2-9-2026
UDAYAVANI - MANIPAL

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಸಾಧನೆ

ಕ್ಲಿಷ್ಟಕರ ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಶಸ್ತ್ರಚಿಕಿತ್ಸೆ

ಮಣಿಪಾಲ, ಸೆ. 1: ಉದರದ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ಒಂದನ್ನು ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಕೀಹೋಲ್ ಶಸ್ತ್ರಚಿಕಿತ್ಸೆ ಮತ್ತು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ರೊಬೋಟ್‌ನ ಸಂಯೋಜನೆಯನ್ನು ಬಳಸಿ 58 ವರ್ಷದ ಮಹಿಳೆಯೊಬ್ಬರಿಂದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತೆಗೆದುಹಾಕಿ ಕೇವಲ ಏಳು ದಿನಗಳಲ್ಲಿ ಅವರು ಮನೆಗೆ ಕಳುಹಿಸಿಕೊಟ್ಟಿದ್ದಾರೆ.

ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿದ್ದರಿಂದ ಆಸ್ಪತ್ರೆಗೆ ಬಂದಿದ್ದರು. ಸ್ಕ್ಯಾನ್‌ಗಳಲ್ಲಿ ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಬೆಳೆಯುವ ಕ್ಯಾನ್ಸರ್ ಆದ ಪೆರಿಆಂಪುಲರಿ ಗಡ್ಡೆ ಕಂಡುಬಂದಿತು. ಇದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು. ರೋಗಿಯ ಶರೀರ ರಚನೆಯಲ್ಲಿನ ಅಸ್ವಾಭಾವಿಕ ವೈಶಿಷ್ಟ್ಯವು ಈ ಪ್ರಕರಣ ಇನ್ನಷ್ಟು ಕಷ್ಟಕರವಾಗಿಸಿತು. ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು, ತಂಡವು ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿಯನ್ನು ನಡೆಸಿತು. ಇದು ಶಸ್ತ್ರಚಿಕಿತ್ಸಕರೊಬ್ಬರು ಕೈಗೊಳ್ಳಬಹುದಾದ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆಗಳಲ್ಲಿ ಒಂದಾಗಿದೆ. ಗಡ್ಡೆಯನ್ನು ಸಣ್ಣ ಕೀಹೋಲ್ ಛೇದಗಳ ಮೂಲಕ ತೆಗೆದುಹಾಕಲಾಯಿತು, ಸೂಕ್ಷ್ಮ ಪುನಾರಚನೆಯನ್ನು ಹುಗೋರಾಸ್ ರೊಬೊಟಿಕ್ ಬಳಸಿ ನಡೆಸಲಾಯಿತು.

ಇಂತಹ ಪ್ರಕರಣಗಳು ತಾಂತ್ರಿಕವಾಗಿ ಬಹಳ ಸವಾಲಿನವು. ವಿಶೇಷವಾಗಿ ಅಸ್ವಾಭಾವಿಕ ಯಕೃತ್ತಿನಿನ ರಕ್ತನಾಳವು ಶಸ್ತ್ರಚಿಕಿತ್ಸೆ ನಡೆಸುತ್ತಿರುವ ಪ್ರದೇಶದ ಮೂಲಕ ಹಾದುಹೋಗುತ್ತಿದ್ದಾಗ, ತಪ್ಪಿಗೆ ಬಹಳ ಕಡಿಮೆ ಅವಕಾಶವಿರುತ್ತದೆ ಎಂದು ಆಸ್ಪತ್ರೆಯ ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ। ನವೀನಾ ಎ.ಎನ್. ಕುಮಾರ್ ಹೇಳಿದರು.

ಶಸ್ತ್ರಚಿಕಿತ್ಸಾ ತಂಡದಲ್ಲಿ ಡಾ। ನವಾಜ್ ಉಸ್ಮಾನ್, ಡಾ। ಪ್ರೀತಿ ಎಸ್. ಶೆಟ್ಟಿ, ಡಾ। ಅಖಿಲ್ ಪಾಲೋಡ್, ಡಾ। ಅನಂತಕೃಷ್ಣನ್ ಬಾಲಕೃಷ್ಣನ್ ಸೇರಿದಂತೆ ಅರಿವಳಿಕೆ ತಜ್ಞರು ಇದ್ದರು.

ಕೇವಲ 200 ಎಂಎಲ್ ರಕ್ತಸ್ರಾವ

ತೆರೆದ ಶಸ್ತ್ರಚಿಕಿತ್ಸೆಗೆ ಬದಲಾಯಿಸುವ ಅಗತ್ಯವಿಲ್ಲದೆ ಇಡೀ ಪ್ರಕ್ರಿಯೆ ಪೂರ್ಣಗೊಂಡಿತು. ಸುಮಾರು 8 ಗಂಟೆ ಕಾಲ ನಡೆಯಿತು ಮತ್ತು ಕೇವಲ 200 ಮಿ.ಲೀ. ರಕ್ತಸ್ರಾವವಾಗಿದೆ.

ಕೆಎಂಸಿಯಲ್ಲಿ ಜಾಗತಿಕ ಗುಣಮಟ್ಟದ ಚಿಕಿತ್ಸೆ

ಈ ಪ್ರದೇಶಕ್ಕೆ ಅತ್ಯುತ್ತಮ ವೈದ್ಯಕೀಯ ತಂತ್ರಜ್ಞಾನ ಮತ್ತು ಮೂಲಸೌಕರ್ಯವನ್ನು ತರುವುದೇ ನಮ್ಮ ಗುರಿ. ಇದರಿಂದ ಇಲ್ಲಿನ ರೋಗಿಗಳು ಮನೆಯಿಂದ ದೂರ ಪ್ರಯಾಣಿಸದೆ, ಜಗತ್ತಿನ ಯಾವುದೇ ಶ್ರೇಷ್ಠ ಕೇಂದ್ರಗಳಲ್ಲಿ ಲಭ್ಯವಿರುವ ಅದೇ ಗುಣಮಟ್ಟದ ಆರೈಕೆಯನ್ನು ನಮ್ಮಲ್ಲಿ ಪಡೆಯಬಹುದಾಗಿದೆ.

– ಡಾ। ಸುಧಾಕರ್ ಕಂಟಿಪುಡಿ,
ಸಿಒಒ, ಮಾಹೆ ಬೋಧನ ಆಸ್ಪತ್ರೆಗಳು

ಹೊಸ ದಿಗಂತ

ಶನಿವಾರ 05, ಸೆಪ್ಟೆಂಬರ್ 2026

ಕಸ್ತೂರ್ಬಾ ಆಸ್ಪತ್ರೆ: ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ

ಉಡುಪಿ: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಅತ್ಯಂತ ಕ್ಲಿಷ್ಟಕರವಾದ ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಕೀಹೋಲ್ ಶಸ್ತ್ರಚಿಕಿತ್ಸೆ , ಅತ್ಯಾಧುನಿಕ ರೊಬೊಟಿಕ್ ತಂತ್ರಜ್ಞಾನದ ಸಂಯೋಜನೆ ಮೂಲಕ ಯಶಸ್ವಿ ಚಿಕಿತ್ಸೆ ನೀಡಿ, 58 ವರ್ಷದ ಮಹಿಳೆಯನ್ನು ಗುಣಮುಖರನ್ನಾಗಿಸಿದ್ದಾರೆ.

ಪ್ರತಿರೋಧಕಕಾಮಾಲೆಲಕ್ಷಣದೊಂದಿಗೆ ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯನ್ನು ಪರೀಕ್ಷಿಸಿದಾಗ, ಕರುಳಿನ ಗೋಡೆ , ಮೇದೋಜೀರಕ ಗ್ರಂಥಿಯ ತಲೆಗೆ ಹರಡಿದ್ದ ಪೆರಿಆಂಪುಲರಿ ಗಡ್ಡೆ ಪತ್ತೆಯಾಗಿತ್ತು. ಜೊತೆಗೆ ಯಕೃತ್ತಿಗೆ ರಕ್ತ ಪೂರೈಸುವ ಮುಖ್ಯ ರಕ್ತನಾಳವೊಂದು ಗಡ್ಡೆಯ ಸಮೀಪದಲ್ಲೇ ಅಸಹಜ ಮಾರ್ಗದಲ್ಲಿ ಹಾದುಹೋಗುತ್ತಿದ್ದುದು ಶಸ್ತ್ರಚಿಕಿತ್ಸೆ ಅಪಾಯ, ಸವಾಲನ್ನು ಇನ್ನಷ್ಟು ಹೆಚ್ಚಿಸಿತ್ತು.

ಹೈಬ್ರಿಡ್ ರೊಬೊಟಿಕ್ ಚಿಕಿತ್ಸೆ

ವೈದ್ಯಕೀಯ ತಂಡವು ಅತ್ಯಂತ ಸವಾಲಿನ 'ವಿಪಲ್ಸ್ ಶಸ್ತ್ರಚಿಕಿತ್ಸೆ'ಯನ್ನು (ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿ) ನಡೆಸಿತು. ಸಾಂಪ್ರದಾಯಿಕ ದೊಡ್ಡ ಗಾಯದ ತೆರೆದ ಶಸ್ತ್ರಚಿಕಿತ್ಸೆ ಬದಲಿಗೆ, ಕೀಹೋಲ್ ಮೂಲಕ ಗಡ್ಡೆ ಪಿತ್ತರಸ ನಾಳ, ಕರುಳಿನ ಭಾಗ ತೆಗೆದುಹಾಕಲಾಯಿತು. ಬಳಿಕ ಅತ್ಯಾಧುನಿಕ 'ಹ್ಯೂಗೋ ರಾಸ್' ರೊಬೊಟಿಕ್ ವ್ಯವಸ್ಥೆ ಬಳಸಿ



ಸೂಕ್ಷ್ಮ ಪುನರ್ರಚನೆ'ಡೆಸಲಾಯಿತು.

ಆಸ್ಪತ್ರೆಯಿಂದ ಡಿಸ್ಚಾರ್ಜ್

ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ. ನವೀನಾ ಎ. ಎನ್. ಕುಮಾರ್ ನೇತೃತ್ವದಲ್ಲಿ ನಡೆದ ಈ ಶಸ್ತ್ರಚಿಕಿತ್ಸೆ ಸುಮಾರು 8 ಗಂಟೆಗಳ ಕಾಲ ನಡೆದಿದ್ದು, ಕೇವಲ 200 ಮಿ.ಲೀ. ರಕ್ತಸ್ರಾವದೊಂದಿಗೆ ಯಶಸ್ವಿಯಾಗಿ ಪೂರ್ಣಗೊಂಡಿತು. ರೋಗಿ 7 ದಿನದಲ್ಲಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ವೈದ್ಯರಾದ ಡಾ. ನವಾಜ್ ಉಸ್ಮಾನ್, ಡಾ. ಪ್ರೀತಿ ಎಸ್. ಶೆಟ್ಟಿ ಡಾ. ಅಖಿಲ್ ಪಾಲೋಡ್, ಡಾ. ಅನಂತಕೃಷ್ಣನ್ ಬಾಲಕೃಷ್ಣನ್ ಇದ್ದರು.

ಕರಾವಳಿ ಭಾಗದ ರೋಗಿಗಳು ಮೆಟ್ರೋ ನಗರಗಳಿಗೆ ತೆರಳುವ ಅಗತ್ಯವಿಲ್ಲದೆ, ಸ್ಥಳೀಯವಾಗಿಯೇ ಜಾಗತಿಕ ಗುಣಮಟ್ಟದ ಆಧುನಿಕ ವೈದ್ಯಕೀಯ ಚಿಕಿತ್ಸೆ ದೊರೆಯುವಂತೆ ಮೂಲ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ ಎಂದು ಮಾಹೆ ಟೀಚಿಂಗ್ ಹಾಸ್ಪಿಟಲ್‌ನ ಸಿಇಒ ಡಾ. ಸುಧಾಕರ್ ಕಂಟಿಪುಡಿ ತಿಳಿಸಿದ್ದಾರೆ.

DHRISHYA NEWS

LINK: https://www.dhrishyanews.com/?p=38343

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಕರಿಂದ ಕೀಹೋಲ್ ಮತ್ತು ರೊಬೊಟಿಕ್ ಮೂಲಕ ಕ್ಲಿಷ್ಟಕರವಾದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ನ ಯಶಸ್ವಿ ಶಸ್ತ್ರಚಿಕಿತ್ಸೆ

ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಮತ್ತು ಗಡ್ಡೆಯ ಹತ್ತಿರ ಹಾದುಹೋಗಿದ್ದ ಅಸ್ವಾಭಾವಿಕ ಯಕೃತ್ತಿನಿನ ರಕ್ತನಾಳ ಹೊಂದಿದ್ದ 58 ವರ್ಷದ ಮಹಿಳೆಗೆ, ಕೀಹೋಲ್ ಮತ್ತು ರೊಬೊಟಿಕ್ ವಿಧಾನಗಳ ಸಂಯೋಜನೆಯ ಮೂಲಕ ದೊಡ್ಡ ತೆರೆದ ಶಸ್ತ್ರಚಿಕಿತ್ಸೆ ಇಲ್ಲದೆ ಚಿಕಿತ್ಸೆ ನೀಡಲಾಗಿದೆ.

by Dhrishya News — 01/09/2026 in ಸುದ್ದಿಗಳು 0



0 SHARES 31 VIEWS

ಮಣಿಪಾಲ, 01 ಸೆಪ್ಟೆಂಬರ್ 2026: ಉದರ ಶಸ್ತ್ರಚಿಕಿತ್ಸೆಯಲ್ಲಿನ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ಒಂದನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಕೀಹೋಲ್ ಶಸ್ತ್ರಚಿಕಿತ್ಸೆ ಮತ್ತು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ರೋಬೋಟ್‌ನ ಸಂಯೋಜನೆಯನ್ನು ಬಳಸಿ 58 ವರ್ಷದ ಮಹಿಳೆಯೊಬ್ಬರಿಂದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತೆಗೆದುಹಾಕಿ, ಕೇವಲ ಏಳು ದಿನಗಳಲ್ಲಿ ಅವರನ್ನು ಮನೆಗೆ ಕಳುಹಿಸಿದ್ದಾರೆ.



KARAVALI EXPRESS

LINK: https://www.karavalixpress.in/2026/09/kmc.html

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಕರಿಂದ ಕೀಹೋಲ್ ಮತ್ತು ರೊಬೊಟಿಕ್ ಮೂಲಕ ಕ್ಲಿಷ್ಟಕರವಾದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ನ ಯಶಸ್ವಿ ಶಸ್ತ್ರಚಿಕಿತ್ಸೆ

KaravaliXpress~Janardhan Kodavoor ಸೆಪ್ಟೆಂಬರ್ 01, 2026

ಉದರ ಶಸ್ತ್ರಚಿಕಿತ್ಸೆಯಲ್ಲಿನ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ಒಂದನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಕೀಹೋಲ್ ಶಸ್ತ್ರಚಿಕಿತ್ಸೆ ಮತ್ತು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ರೊಬೊಟ್‌ನ ಸಂಯೋಜನೆಯನ್ನು ಬಳಸಿ 58 ವರ್ಷದ ಮಹಿಳೆಯೊಬ್ಬರಿಂದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತೆಗೆದುಹಾಕಿ, ಕೇವಲ ಏಳು ದಿನಗಳಲ್ಲಿ ಅವರನ್ನು ಮನೆಗೆ ಕಳುಹಿಸಿದ್ದಾರೆ.

ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿದ್ದ ದೂರಿನೊಂದಿಗೆ ಆಸ್ಪತ್ರೆಗೆ ಬಂದಿದ್ದರು. ಇದು ಗಡ್ಡೆಯು ಯಕೃತ್ತಿನಿಂದ ಪಿತ್ತರಸದ ಹರಿವನ್ನು ತಡೆದಾಗ ಉಂಟಾಗುವ ಪ್ರತಿರೋಧಕ ಕಾಮಾಲೆಯ ಲಕ್ಷಣ. ಸ್ಕ್ಯಾನ್‌ಗಳಲ್ಲಿ, ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಬೆಳೆಯುವ ಕ್ಯಾನ್ಸರ್ ಆದ ಪೆರಿಆಂಪುಲರಿ ಗಡ್ಡೆ ಕಂಡುಬಂದಿತು. ಇದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು.

ರೋಗಿಯ ಶರೀರರಚನೆಯಲ್ಲಿನ ಅಸ್ವಾಭಾವಿಕ ವೈಶಿಷ್ಟ್ಯವು ಈ ಪ್ರಕರಣವನ್ನು ಇನ್ನಷ್ಟು ಕಷ್ಟಕರವಾಗಿಸಿತು. ಯಕೃತ್ತಿಗೆ ರಕ್ತ ಪೂರೈಸುವ ಅಪಧಮನಿಗಳಲ್ಲಿ ಒಂದು, ಗಡ್ಡೆಯ ಸಮೀಪದಲ್ಲೇ, ಶಸ್ತ್ರಚಿಕಿತ್ಸೆಯ ಸ್ಥಳದ ಮೂಲಕವೇ ಅಸಹಜ ಮಾರ್ಗದಲ್ಲಿ ಹಾದುಹೋಗುತ್ತಿತ್ತು. ಕೆಲವೇ ಜನರಲ್ಲಿ ಕಂಡುಬರುವ ಈ ವ್ಯತ್ಯಾಸವು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವ ಮತ್ತು ಗಾಯದ ಅಪಾಯವನ್ನು ಬಹಳವಾಗಿ ಹೆಚ್ಚಿಸುತ್ತದೆ.

ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು, ತಂಡವು 'ವಿಪಲ್ಸ್ ಶಸ್ತ್ರಚಿಕಿತ್ಸೆ' ಎಂದೇ ಹೆಚ್ಚು ಪರಿಚಿತವಾಗಿರುವ ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿಯನ್ನು ನಡೆಸಿತು. ಇದು ಶಸ್ತ್ರಚಿಕಿತ್ಸಕರೊಬ್ಬರು ಕೈಗೊಳ್ಳಬಹುದಾದ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆಗಳಲ್ಲಿ ಒಂದೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಮೇದೋಜೀರಕ ಗ್ರಂಥಿಯ ತಲೆ, ಸಣ್ಣ ಕರುಳಿನ ಒಂದು ಭಾಗ, ಪಿತ್ತರಸ ನಾಳ ಮತ್ತು ಪಿತ್ತಕೋಶವನ್ನು ತೆಗೆದುಹಾಕಿ, ನಂತರ ಆಹಾರ ಮತ್ತು ಜೀರ್ಣರಸಗಳು ಮತ್ತೆ ಸಾಮಾನ್ಯವಾಗಿ ಹರಿಯುವಂತೆ ಜೀರ್ಣಾಂಗವನ್ನು ಜಾಗರೂಕತೆಯಿಂದ ಮತ್ತೆ ಜೋಡಿಸಲಾಗುತ್ತದೆ.

ದೊಡ್ಡ ಗಾಯದ ಅಗತ್ಯವಿರುವ ಮತ್ತು ಸಾಮಾನ್ಯವಾಗಿ ಹೆಚ್ಚು ನೋವು ಹಾಗೂ ದೀರ್ಘ ಚೇತರಿಕೆಗೆ ಕಾರಣವಾಗುವ ಸಾಂಪ್ರದಾಯಿಕ ತೆರೆದ ಶಸ್ತ್ರಚಿಕಿತ್ಸೆಯ ಬದಲಿಗೆ, ಶಸ್ತ್ರಚಿಕಿತ್ಸಕರು ಹೈಬ್ರಿಡ್, ಕನಿಷ್ಠ ಆಕ್ರಮಣಕಾರಿ ವಿಧಾನವನ್ನು ಆಯ್ಕೆ ಮಾಡಿಕೊಂಡರು. ಗಡ್ಡೆಯನ್ನು ಸಣ್ಣ ಕೀಹೋಲ್ ಛೇದಗಳ ಮೂಲಕ ತೆಗೆದುಹಾಕಲಾಯಿತು, ಮತ್ತು ಸೂಕ್ಷ್ಮ ಪುನರ್ರಚನೆಯನ್ನು HUGO RAS ರೊಬೊಟಿಕ್ ವ್ಯವಸ್ಥೆಯನ್ನು ಬಳಸಿ ನಡೆಸಲಾಯಿತು. ಈ ವ್ಯವಸ್ಥೆಯು ಶಸ್ತ್ರಚಿಕಿತ್ಸಕರಿಗೆ ಶಸ್ತ್ರಚಿಕಿತ್ಸೆಯ ಸ್ಥಳದ ವಿಸ್ತರಿಸಿದ, ತ್ರಿಆಯಾಮದ ನೋಟವನ್ನು ಮತ್ತು ಮಾನವ ಮಣಿಕಟ್ಟಿಗಿಂತ ಹೆಚ್ಚು ಮುಕ್ತವಾಗಿ ಬಾಗುವ ಹಾಗೂ ತಿರುಗುವ ಉಪಕರಣಗಳನ್ನು ಒದಗಿಸುತ್ತದೆ.

KARAVALI NEWS

LINK: https://karavalinews.com/successful-pancreatic-cancer-surgery-at-kasturba-hospital-manipal-complicated-keyhole-and-robotic-surgery-successful/

ಮಣಿಪಾಲ,ಸೆ.01: ಉದರ ಶಸ್ತ್ರಚಿಕಿತ್ಸೆಯಲ್ಲಿನ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ಒಂದಾಗಿರುವ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಕೀಹೋಲ್ ಶಸ್ತ್ರಚಿಕಿತ್ಸೆ ಮತ್ತು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ರೊಬೊಟ್‌ನ ಸಂಯೋಜನೆಯನ್ನು ಬಳಸಿ 58 ವರ್ಷದ ಮಹಿಳೆಯೊಬ್ಬರಿಂದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತೆಗೆದುಹಾಕಿ, ಕೇವಲ ಏಳು ದಿನಗಳಲ್ಲಿ ಅವರನ್ನು ಡಿಸ್ಚಾರ್ಜ್ ಮಾಡಿ ಮನೆಗೆ ಕಳುಹಿಸಿದ್ದಾರೆ. ಮಹಿಳಾ ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾದ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಇದು ಗಡ್ಡೆಯು ಯಕೃತ್ತಿನಿಂದ ಪಿತ್ತರಸದ ಹರಿವನ್ನು ತಡೆದಾಗ ಉಂಟಾಗುವ ಪ್ರತಿರೋಧಕ ಕಾಮಾಲೆಯ ಲಕ್ಷಣ. ಸ್ಕ್ಯಾನ್‌ಗಳಲ್ಲಿ, ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಬೆಳೆಯುವ ಕ್ಯಾನ್ಸರ್ ಆದ ಪೆರಿಆಂಪುಲರಿ ಗಡ್ಡೆ ಕಂಡುಬAದಿತು. ಇದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು.ರೋಗಿಯ ಶರೀರರಚನೆಯಲ್ಲಿನ ಅಸ್ವಾಭಾವಿಕ ವೈಶಿಷ್ಟ್ಯವು ಈ ಪ್ರಕರಣವನ್ನು ಇನ್ನಷ್ಟು ಕಷ್ಟಕರವಾಗಿಸಿತು. ಯಕೃತ್ತಿಗೆ ರಕ್ತ ಪೂರೈಸುವ ಅಪಧಮನಿಗಳಲ್ಲಿ ಒಂದು, ಗಡ್ಡೆಯ ಸಮೀಪದಲ್ಲೇ, ಶಸ್ತ್ರಚಿಕಿತ್ಸೆಯ ಸ್ಥಳದ ಮೂಲಕವೇ ಅಸಹಜ ಮಾರ್ಗದಲ್ಲಿ ಹಾದುಹೋಗುತ್ತಿತ್ತು. ಕೆಲವೇ ಜನರಲ್ಲಿ ಕಂಡುಬರುವ ಈ ವ್ಯತ್ಯಾಸವು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವ ಮತ್ತು ಗಾಯದ ಅಪಾಯವಿತ್ತು,

ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು, ತಂಡವು 'ವಿಪಲ್ಸ್ ಶಸ್ತ್ರಚಿಕಿತ್ಸೆ' ಎಂದೇ ಹೆಚ್ಚು ಪರಿಚಿತವಾಗಿರುವ ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿಯನ್ನು ನಡೆಸಿತು. ಇದು ಶಸ್ತ್ರಚಿಕಿತ್ಸಕರೊಬ್ಬರು ಕೈಗೊಳ್ಳಬಹುದಾದ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆಗಳಲ್ಲಿ ಒಂದೆAದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಮೇದೋಜೀರಕ ಗ್ರಂಥಿಯ ತಲೆ, ಸಣ್ಣ ಕರುಳಿನ ಒಂದು ಭಾಗ, ಪಿತ್ತರಸ ನಾಳ ಮತ್ತು ಪಿತ್ತಕೋಶವನ್ನು ತೆಗೆದುಹಾಕಿ, ನಂತರ ಆಹಾರ ಮತ್ತು ಜೀರ್ಣರಸಗಳು ಮತ್ತೆ ಸಾಮಾನ್ಯವಾಗಿ ಹರಿಯುವಂತೆ ಜೀರ್ಣಾಂಗವನ್ನು ಜಾಗರೂಕತೆಯಿಂದ ಮತ್ತೆ ಜೋಡಿಸಲಾಗುತ್ತದೆ.ಶಸ್ತ್ರಚಿಕಿತ್ಸೆಯ ಮೂಲಕ ಗಡ್ಡೆಯನ್ನು ಸಣ್ಣ ಕೀಹೋಲ್ ಛೇದಗಳ ಮೂಲಕ ತೆಗೆದುಹಾಕಲಾಯಿತು.

ವಿಶೇಷವಾಗಿ ಅಸ್ವಾಭಾವಿಕ ಯಕೃತ್ತಿನಿನ ರಕ್ತನಾಳವು ಶಸ್ತ್ರಚಿಕಿತ್ಸೆ ನಡೆಸುತ್ತಿರುವ ಪ್ರದೇಶದ ಮೂಲಕ ಹಾದುಹೋಗುತ್ತಿದ್ದಾಗ, ತಪ್ಪಿಗೆ ಬಹಳ ಕಡಿಮೆ ಅವಕಾಶವಿರುತ್ತದೆ," ಎಂದು ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ. ನವೀನಾ ಎ. ಎನ್. ಕುಮಾರ್ ಹೇಳಿದರು. "ಕೀಹೋಲ್ ಮೂಲಕ ಗಡ್ಡೆ ತೆಗೆಯುವುದನ್ನು ರೊಬೊಟಿಕ್ ಪುನರ್ರಚನೆಯೊಂದಿಗೆ ಸಂಯೋಜಿಸುವ ಮೂಲಕ, ನಾವು ಇಡೀ ಶಸ್ತ್ರಚಿಕಿತ್ಸೆಯನ್ನು ಸುರಕ್ಷಿತವಾಗಿ ಹಾಗೂ ಹೆಚ್ಚಿನ ನಿಖರತೆಯಿಂದ ಪೂರ್ಣಗೊಳಿಸಲು ಸಾಧ್ಯವಾಯಿತು.ರೋಗಿಗಳನ್ನು ದೂರದ ನಗರಗಳಿಗೆ ಕಳುಹಿಸುವ ಬದಲಿಗೆ, ಇಂತಹ ಅತ್ಯಾಧುನಿಕ, ಕನಿಷ್ಠ ಆಕ್ರಮಣಕಾರಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯನ್ನು ಮನೆಯ ಸಮೀಪದಲ್ಲೇ ಒದಗಿಸಲು ಸಾಧ್ಯವಾಗಿರುವುದು ಈ ಪ್ರದೇಶದ ಜನರಿಗೆ ಒಂದು ಮಹತ್ವದ ಹೆಜ್ಜೆಯಾಗಿದೆ. ಶಸ್ತ್ರಚಿಕಿತ್ಸಾ ತಂಡದಲ್ಲಿ ಡಾ. ನವಾಜ್ ಉಸ್ಮಾನ್, ಡಾ. ಪ್ರೀತಿ ಎಸ್. ಶೆಟ್ಟಿ, ಡಾ. ಅಖಿಲ್ ಪಾಲೋಡ್ ಹಾಗೂ ಡಾ. ಅನಂತಕೃಷ್ಣನ್ ಬಾಲಕೃಷ್ಣನ್ ಸೇರಿದಂತೆ ಅರಿವಳಿಕೆ ತಜ್ಞರು ಉಪಸ್ಥಿತರಿದ್ದರು. ಶಸ್ತ್ರಚಿಕಿತ್ಸೆಯ ಯಶಸ್ವಿ ನಿರ್ವಹಣೆಗೆ ಓಟಿ ಸಿಬ್ಬಂದಿಯೂ ಅಗತ್ಯ ಸಹಕಾರ ನೀಡಿದರು ಎಂದರು.

ಈ ಯಶಸ್ವಿ ಶಸ್ತ್ರಚಿಕಿತ್ಸೆಯು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ವಿಶ್ವದರ್ಜೆಯ ಶಸ್ತ್ರಚಿಕಿತ್ಸೆಗೆ ಹೆಸರುವಾಸಿಯಾಗಿದೆ ಎಂದು ಸಾಬೀತಾಗಿದೆ. ದೇಶದ ದೊಡ್ಡ ಮಹಾನಗರಗಳಿಂದ ಬಹಳ ದೂರದಲ್ಲಿದ್ದರೂ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ಬೋಧನಾ ಆಸ್ಪತ್ರೆಯು ಅತ್ಯಾಧುನಿಕ ರೊಬೊಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಗಳು ಮತ್ತು ಆಧುನಿಕ ಶಸ್ತ್ರಚಿಕಿತ್ಸಾ ಕೊಠಡಿಗಳಿಂದ ಹಿಡಿದು ವಿಶೇಷ, ಬಹುಶಿಸ್ತೀಯ ಕ್ಯಾನ್ಸರ್ ತಂಡಗಳವರೆಗೆ ಅಂತಾರಾಷ್ಟ್ರೀಯ ಗುಣಮಟ್ಟದ ಸೌಲಭ್ಯಗಳನ್ನು ಕ್ರಮೇಣ ಬೆಳೆಸಿಕೊಂಡಿದೆ. ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಕರಾವಳಿ ಕರ್ನಾಟಕ ಮತ್ತು ಸುತ್ತಮುತ್ತಲ ಪ್ರದೇಶದ ರೋಗಿಗಳು ದೂರದ ನಗರಗಳಿಗೆ ಅಥವಾ ವಿದೇಶಗಳಿಗೆ ಹೋಗದೇ ತಮ್ಮ ಮನೆಬಾಗಿಲಲ್ಲೇ ಅತ್ಯಾಧುನಿಕ ಕ್ಯಾನ್ಸರ್ ಆರೈಕೆಯನ್ನು ಪಡೆಯಬಹುದಾಗಿದೆ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ತಿಳಿಸಿದೆ.

VIJAYAVAANI

LINK: https://www.vijayavani.net/category/news/udupis-manipal-kmc-doctors-remove-cancerous-tumor-from-womans-pancreas-using-keyhole-robotic-technology

ಉಡುಪಿ

ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ



ಉಡುಪಿ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಕೀಹೋಲ್ ಮತ್ತು ರೋಬಾಟಿಕ್ ತಂತ್ರಜ್ಞಾನದಲ್ಲಿ ಶಸ್ತ್ರಚಿಕಿತ್ಸೆ ನಡೆಸಿದ ವಿಧಾನ.

Published on: 01 Sep 2026, 8:04 pm

Follow Us

* ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಸಾಧನೆ

ಉಡುಪಿ: ಉದರ ಶಸ್ತ್ರಚಿಕಿತ್ಸೆಯಲ್ಲಿ ಅತ್ಯಂತ ಸಂಕೀರ್ಣ ಚಿಕಿತ್ಸೆಯಾಗಿರುವ ಮೇದೋಜೀರಕ ಗ್ರಂಥಿಯಲ್ಲಿದ್ದ ಕ್ಯಾನ್ಸರ್ ಗಡ್ಡೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಕೀಹೋಲ್ ಮತ್ತು ಅತ್ಯಾಧುನಿಕ ರೋಬಾಟಿಕ್ ತಂತ್ರಜ್ಞಾನದಿಂದ ತೆಗೆದುಹಾಕಿದ್ದಾರೆ.

ವೈದ್ಯರ ತಂಡದ ಯಶಸ್ವಿ ಚಿಕಿತ್ಸೆಯಿಂದ 58 ವರ್ಷದ ಮಹಿಳೆಯೊಬ್ಬರ ಜೀವ ಉಳಿದಿದ್ದು, ಕೇವಲ ಏಳು ದಿನಗಳಲ್ಲಿ ಅವರು ಚೇತರಿಸಿಕೊಂಡಿದ್ದಾರೆ.

ಕ್ಲಿಷ್ಟಕರ ಪ್ರಕರಣ

ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿದ್ದರಿಂದ ಆಸ್ಪತ್ರೆಗೆ ಬಂದಿದ್ದರು. ಇದು ಕ್ಯಾನ್ಸರ್ ಗಡ್ಡೆಯು ಯಕೃತ್ತಿನಿಂದ ಪಿತ್ತರಸದ ಹರಿವು ತಡೆದಾಗ ಉಂಟಾಗುವ ಪ್ರತಿರೋಧಕ ಕಾಮಾಲೆಯ ಲಕ್ಷಣ. ಸ್ಕ್ಯಾನ್ ಮಾಡಿದಾಗ ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಪೆರಿಆಂಪುಲರಿ ಗಡ್ಡೆ ಬೆಳೆದಿರುವುದು ಕಂಡುಬಂತು. ಅದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು. ರೋಗಿಯ ಶರೀರ ರಚನೆಯಲ್ಲಿನ ಅಸ್ವಾಭಾವಿಕ ವೈಶಿಷ್ಟ್ಯದಿಂದ ಈ ಪ್ರಕರಣ ಇನ್ನಷ್ಟು ಕಷ್ಟಕರವಾಗಿತ್ತು.

UDAYAVANI NEWS

LINK: https://uvnews.in/7ptookk

ಮಣಿಪಾಲ: ಕ್ಲಿಷ್ಟಕರ ಮೇದೋಜೀರಕ ಗ್ರಂಥಿ ಕ್ಯಾನ್ಸರ್‌ಗೆ ಶಸ್ತ್ರಚಿಕಿತ್ಸೆ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಸಾಧನೆ



ಮಣಿಪಾಲ: ಉದರದ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ಒಂದನ್ನು ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಕೀಹೋಲ್ ಶಸ್ತ್ರಚಿಕಿತ್ಸೆ ಮತ್ತು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ರೊಬೋಟ್‌ನ ಸಂಯೋಜನೆಯನ್ನು ಬಳಸಿ 58 ವರ್ಷದ ಮಹಿಳೆಯೊಬ್ಬರಿಂದ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತೆಗೆದುಹಾಕಿ ಕೇವಲ ಏಳು ದಿನಗಳಲ್ಲಿ ಅವರು ಮನೆಗೆ ಕಳುಹಿಸಿಕೊಟ್ಟಿದ್ದಾರೆ.

ರೋಗಿಯು ಕಣ್ಣು ಮತ್ತು ಚರ್ಮ ಹಳದಿಯಾಗಿದ್ದರಿಂದ ಆಸ್ಪತ್ರೆಗೆ ಬಂದಿದ್ದರು. ಸ್ಕ್ಯಾನ್‌ಗಳಲ್ಲಿ ಪಿತ್ತರಸ ಮತ್ತು ಮೇದೋಜೀರಕ ನಾಳಗಳು ಸಣ್ಣ ಕರುಳಿಗೆ ತೆರೆದುಕೊಳ್ಳುವ ಸ್ಥಳದಲ್ಲಿ ಬೆಳೆಯುವ ಕ್ಯಾನ್ಸರ್ ಆದ ಪೆರಿಆಂಪುಲರಿ ಗಡ್ಡೆ ಕಂಡುಬಂದಿತು.

ಇದು ಕರುಳಿನ ಗೋಡೆ ಮತ್ತು ಮೇದೋಜೀರಕ ಗ್ರಂಥಿಯ ತಲೆಗೆ ಹರಡಿತ್ತು. ರೋಗಿಯ ಶರೀರ ರಚನೆಯಲ್ಲಿನ ಅಸ್ವಾಭಾವಿಕ ವೈಶಿಷ್ಟ್ಯ ವು ಈ ಪ್ರಕರಣ ಇನ್ನಷ್ಟು ಕಷ್ಟಕರವಾಗಿಸಿತು. ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು, ತಂಡವು ಪ್ಯಾಂಕ್ರಿಯಾಟಿಕೊಡ್ಯುಡೆನೆಕ್ಟಮಿಯನ್ನು ನಡೆಸಿತು. ಇದು ಶಸ್ತ್ರಚಿಕಿತ್ಸಕರೊಬ್ಬರು ಕೈಗೊಳ್ಳಬಹುದಾದ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆಗಳಲ್ಲಿ ಒಂದಾಗಿದೆ. ಗಡ್ಡೆಯನ್ನು ಸಣ್ಣ ಕೀಹೋಲ್ ಛೇದಗಳ ಮೂಲಕ ತೆಗೆದುಹಾಕಲಾಯಿತು, ಸೂಕ್ಷ್ಮ ಪುನಾರಚನೆಯನ್ನು ಹುಗೋರಾಸ್ ರೊಬೊಟಿಕ್ ಬಳಸಿ ನಡೆಸಲಾಯಿತು.

ಇಂತಹ ಪ್ರಕರಣಗಳು ತಾಂತ್ರಿಕವಾಗಿ ಬಹಳ ಸವಾಲಿನವು. ವಿಶೇಷವಾಗಿ ಅಸ್ವಾಭಾವಿಕ ಯಕೃತ್ತಿನಿನ ರಕ್ತನಾಳವು ಶಸ್ತ್ರಚಿಕಿತ್ಸೆ ನಡೆಸುತ್ತಿರುವ ಪ್ರದೇಶದ ಮೂಲಕ ಹಾದುಹೋಗುತ್ತಿದ್ದಾಗ, ತಪ್ಪಿಗೆ ಬಹಳ ಕಡಿಮೆ ಅವಕಾಶವಿರುತ್ತದೆ ಎಂದು ಆಸ್ಪತ್ರೆಯ ಸರ್ಜಿಕಲ್ ಆಂಕಾಲಜಿ ವಿಭಾಗದ ಡಾ|ನವೀನಾ ಎ.ಎನ್. ಕುಮಾರ್ ಹೇಳಿದರು.

ಶಸ್ತ್ರಚಿಕಿತ್ಸಾ ತಂಡದಲ್ಲಿ ಡಾ|ನವಾಜ್ ಉಸ್ಮಾನ್, ಡಾ|ಪ್ರೀತಿ ಎಸ್. ಶೆಟ್ಟಿ, ಡಾ|ಅಖಿಲ್ ಪಾಲೋಡ್, ಡಾ|ಅನಂತಕೃಷ್ಣನ್ ಬಾಲಕೃಷ್ಣನ್ ಸೇರಿದಂತೆ ಅರಿವಳಿಕೆ ತಜ್ಞರು ಇದ್ದರು.

UDAYAVANI NEWS

LINK: https://uvnews.in/pxsmqmz

Manipal doctors remove pancreatic cancer using robotic surgery, patient discharged in **7** days



Manipal: Doctors at Kasturba Hospital, Manipal, have successfully removed pancreatic cancer from a 58-year-old woman using a combination of keyhole surgery and advanced surgical robotics. The patient was discharged just seven days after the procedure.

The woman had presented to the hospital with yellowing of the eyes and skin. Scans revealed a periampullary tumour, a cancerous growth occurring where the bile duct and pancreatic duct open into the small intestine.

The tumour had spread to the intestinal wall and the head of the pancreas. The patient's unusual anatomical features made the procedure even more challenging.

To treat the cancer, the surgical team performed a pancreaticoduodenectomy (Whipple procedure), one of the most complex operations performed by surgeons. The tumour was removed through small keyhole incisions, while delicate reconstruction was carried out using a Hugo robotic surgical system.

DAIJIWORLD.COM

LINK: https://share.google/XOdoyVCLlXhRZeohV

Kasturba Hospital, Manipal surgeons perform complex keyhole robotic pancreatic cancer surgery

Tue, Sep 01 2026 06:00:15 PM By Daijiworld Media Network

Media Release

Udupi, Sep 1: In one of the most complex operations in abdominal surgery, doctors at Kasturba Hospital, Manipal, have successfully removed a pancreatic cancer from a 58-year-old woman using a combination of keyhole surgery and an advanced surgical robot, sending her home within just seven days.

The patient had come to the hospital with yellowing of the eyes and skin, a sign of obstructive jaundice, which occurs when a tumour blocks the flow of bile from the liver. Scans revealed a bulky periampullary tumour, a cancer that forms at the point where the bile and pancreatic ducts open into the small intestine. It had spread to the wall of the intestine and the head of the pancreas.





KEMMANNU.COM

LINK: https://share.google/64jtovMrUX8jfmGoR

MANIPAL 01 September 2026: In one of the most complex operations in abdominal surgery, doctors at Kasturba Hospital, Manipal, have successfully removed a pancreatic cancer from a 58-year-old woman by a combination of keyhole surgery and an advanced surgical robot, sending her home within just seven days.